# ಮಾರ್ಚ್, 2017 - ತಾಳೆ ಬೆಳೆ ಕೃಷಿಗೆ ಸೂಕ್ತ ಸಲಹೆಗಳು

- ತಾಳೆ ಸಸಿಗಳನ್ನು 2 ಅಡಿ ಅಗಲ X 2 ಅಡಿ ಉದ್ದ X 2 ಅಡಿ ಆಳದ ಗುಂಡಿಗಳಲ್ಲಿ ನೆಡಬೇಕು.

- ತಾಳೆ ಸಸಿಯನ್ನು ನೆಡುವಾಗ ಪ್ರತಿ ಗುಂಡಿಗೆ 400 ಗ್ರಾಂ ಸಿಂಗಲ್ ಸೂಪರ್ ಪಾಸ್ ಫೈಟ್, 50 ಗ್ರಾಂ ಫೋರಟ್ ಮತ್ತು ಒಂದು ಬುಟ್ಟಿ ಸೀಮೆ ಗೊಬ್ಬರವನ್ನು ಚೆನ್ನಾಗಿ ಮಿಶ್ರಗೊಳಿಸಿ ಗುಂಡಿಗೆ ತುಂಬಬೇಕು.

- ತಾಳೆ ಗಿಡಗಳನ್ನು ನರ್ಸರಿಯಿಂದ ತಂದ ನಂತರ ಬಹಳ ದಿನಗಳವರೆಗೆ ತೋಟದಲ್ಲಿಯೇ ಬಿಡಬಾರದು. ನರ್ಸರಿಯಿಂದ ತಂದ ಕೂಡಲೇ ನಾಟಿ ಮಾಡುವುದರಿಂದ ಗಿಡಗಳ ಬೆಳವಣಿಗೆ ಉತ್ತಮವಾಗುತ್ತದೆ.

- ತಾಳೆ ಸಸಿಗಳನ್ನು ನಾಟಿ ಮಾಡಿದ ನಂತರ ಒಂದು ಮೀಟರ್ ಸುತ್ತಳತೆಯಲ್ಲಿ ನೀರನ್ನು ಚೆನ್ನಾಗಿ ನೀಡಬೇಕು. ನೀರಾವರಿ ಕಾಲುವೆಗಳನ್ನು ಉಪ ಕಾಲುವೆಗಳ ಮುಕಾಂತರ ಪ್ರತಿ ತಾಳೆ ಗಿಡಕ್ಕೆ ಸೇರಿಸಿ ವಾರದಲ್ಲಿ ಎರಡು ದಿನ ನೀರನ್ನು ಹಾಯಿಸಬೇಕು.

- ಮೊದಲ ವರ್ಷದಲ್ಲಿ ಒಂದು ಮೀಟರ್, 2 ನೇ ವರ್ಷದಲ್ಲಿ ಎರಡು ಮೀಟರ್ ಮತ್ತು 3 ನೇ ವರ್ಷದ ನಂತರದಲ್ಲಿ ತಾಳೆ ಸಸಿಗಳಿಗೆ ಮೂರು ಮೀಟರ್ ಸುತ್ತಳತೆಯಲ್ಲಿ ನೀರನ್ನು ನೀಡಬೇಕು.

- ಬೇಸಿಗೆ ಕಾಲದಲ್ಲಿ ಮೃದು ಮಣ್ಣಿನಲ್ಲಿ ನೆಟ್ಟಿರುವ ತಾಳೆ ಸಸಿಗಳಿಗೆ ತೆಳುವಾಗಿ ನೀರನ್ನು ಪಾತಿ ಮುಖಾಂತರ ಹಾಯಿಸಬೇಕು.